ಶ್ರೀ ಎರ್. ಶ್ರೀಕಂಠಯ್ಯ.—ತಮಗೆ ಬಂದಿರುವ ಸುದ್ದಿ ಎಷ್ಟು ನಿಜವೋ ಎಂಬುದು ನನಗೆ ಗೊತ್ತಿಲ್ಲ. ಬಹುಮಟ್ಟಿಗೆ ಸ್ಪನ್‌ಸಿಲ್ಕ್ ಜಪಾನ್‌ಗೆ ಕಳ್ಳತನದಲ್ಲಿ ಹೋಗುತ್ತಿದೆಯೆಂದು ತಿಳಿದುಬಂದಿದೆ. ಈ ವಿಚಾರದಲ್ಲಿ ಕೇಂದ್ರಸರ್ಕಾರದವರು ಸಹಕರಿಸದೆ ಇದ್ದರೆ ನಮ್ಮ ರಾಜ್ಯದಲ್ಲಿರುವ ಸ್ಪನ್ ಸಿಲ್ಕ್ ಗಿರಿಣಿಗಳನ್ನು ಮುಚ್ಚುವ ಸ್ಥಿತಿಗೆ ಬರುತ್ತದೆ. ಆದ್ದರಿಂದ ಈ ಬಗ್ಗೆ ತಾವೇನಾದರು ಕೇಂದ್ರ ಸರ್ಕಾರ ದೊಡನೆ ವ್ಯವಹರಿಸುತ್ತಾ ಬಂದಿದ್ದೀರಾ ?

ಶ್ರೀ ಡಿ. ದೇವರಾಜ್ ಅರಸ್.—ಆ ರೀತಿ ಏನು ಆಗುತ್ತಿಲ್ಲ. ಆ ರೀತಿಯಾಗದಂತೆ ಕೇಂದ್ರ ಸರ್ಕಾರದವರು ಮತ್ತು ಸಿಲ್ಕ್ ಬೋರ್ಡ್‌ನವರು ನಮ್ಮೊಡನೆ ಸಹಕರಿಸುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಒಬ್ಬನೇ ವ್ಯಕ್ತಿಗೆ ಸಿಲ್ಕ್‌ದಾರವನ್ನು ಒದಗಿಸುತ್ತಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ಷರತ್ತಿಗೆ ಒಬ್ಬ ಒಪ್ಪಿದ್ದಾನೆ, ಆದ್ದರಿಂದ ಒಬ್ಬನಿಗೇ ಒದಗಿಸುತ್ತಿದ್ದೇವೆ. ಬೇರೆಯವರು ನಮ್ಮ ಷರತ್ತಿಗೆ ಒಪ್ಪಿದರೆ ಅವರಿಗೂ ಒದಗಿಸುತ್ತೇವೆ.

Construction of School Building at Dodda Kanagal Village

141. Sri K. P. CHIKKE GOWDA (Sakleshpur).—

Will the Minister for Education be pleased to state:—

(*a*) the stage at which the matter of the refund of the contribution amount deposited by the villagers of Dodda Kanagal Village in Alur taluk, Hassan district for construction of school building, stands now ;

(*b*) whether it has come to the notice of the Government that the construction work is almost complete and payment of bills to the contractor held up ?

A.—Sri K. V. SHANKARA GOWDA (Minister for Education).—

(*a*) The refund bill is under verification in the District Treasury.

(*b*) Yes.

ಶ್ರೀ ಕೆ. ಪಿ. ಚಿಕ್ಕೇಗೌಡ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಮರುಪಾವತಿ ಮಾಡಬೇಕಾದ ಬಿಲ್ಲನ್ನು ಜಿಲ್ಲಾ ಖಜಾನೆಯಲ್ಲ ತಾಳೆ ನೋಡರಾಗುತ್ತಿದೆಯೆಂದು ಹೇಳಿದ್ದೀರಿ. ಒಂದು ವರ್ಷದಿಂದಲೂ, ತಾಳೆ ನೋಡುತ್ತಿದ್ದೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆ ಬಗ್ಗೆ ಕೆಲವು ಟೆಕ್ನಿಕಲ್ ಡಿಫಿಕಲ್ಟೀಸ್ ಇತ್ತು. ಆದ್ದರಿಂದ ನಿಧಾನವಾಗಿದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಈಗಾಗಲೇ 600 ರೂಪಾಯಿಗಳನ್ನು ಕೊಟ್ಟಿದ್ದೀರಿ, ಉಳಿದ 1,700 ರೂಪಾಯಿಗಳನ್ನು ಕೊಡಲು ತಾಳೆ ನೋಡರಾಗುತ್ತಿದೆಯೆಂದು ಹೇಳುತ್ತೀರಿ; ಠೇವಣಿ ಕೊಟ್ಟಿದ್ದೇ ತಪ್ಪೇ ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ರೆಕಾರ್ಡ್‌ಗಳನ್ನು ವೆರಿಫೈ ಮಾಡಬೇಕಾಗಿರುವುದರಿಂದ ನಿಧಾನವಾಗಿದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಕಾಮಗಾರಿಯ ಕೆಲಸವನ್ನು ಬಹುಪಾಲು ಮುಗಿಸಿದ್ದರೂ ಸಹ ಸಂಬಂಧಪಟ್ಟ ಕಂಟ್ರಾಕ್ಟರುಗಳಿಗೆ ಬಿಲ್ಲುಗಳ ಪೊಬಲಗನ್ನು ಪಾವತಿ ಮಾಡದಿರುವುದರಿಂದ ಅವರಿಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಕೆ. ವಿ. ಶಂಕರಗೌಡ.—ತೊಂದರೆಯಾಗದಂತೆ ಹಾಗ್ರತೆ ಹಣವನ್ನು ಕೊಡರಾಗುತ್ತದೆ